ಶ್ರೀ ಎಸ್. ಎಸ್. ಆರಕೇರಿ.—ಆರ್ಜನಾಳ ಆಗಿ ೫೧ ಲಕ್ಷ ರೂ. ಗಳನ್ನು ಈ ಕೆರೆಗೆ ಎಸ್ಟಿಮೇಟ್ ಮಾಡಿದ್ದೇವೆಂದು ಹೇಳಿದ್ದೀರಿ. ಇದು ಪ್ರುಪೊಲಿಸ್ಟ್ ಬಜೆಟ್‌ನಲ್ಲಿ ಅಂದರೆ ೧೯೮೨ನೇ ಇಸವಿಯಿಂದಲೇ ಬರುತ್ತದೆ. ಆದರೂ ಈ ಕೆರೆಯ ಕೆಲಸ ಇದುವರೆಗೂ ಪ್ರಾರಂಭವಾಗದೇ ಇರುವುದಕ್ಕೆ ಕಾರಣವಾದರೂ ಏನು ಸ್ವಾಮಿ ?

ಶ್ರೀ ಎಂ. ಎಂ. ಖಾರ್ಗೆ.—ಸ್ವಾಮಿ. ಆದು (ಸಿ) ಲಿಸ್ಟ್‌ನಲ್ಲಿ ಇದೆ. ಆದ್ದರಿಂದ ಇದಕ್ಕೆ ಪ್ರಯಾರಿಟಿಯನ್ನು ಕೊಟ್ಟಿಲ್ಲ. ಮುಂದೆ ಯಾವಾಗ ಪ್ರಯಾರಿಟಿ ಕೊಡಬೇಕೆಂದು ಕಂಡುಬರುತ್ತದೆ ಆಗ ಕೊಡುತ್ತೇವೆ.

ಶ್ರೀ ಎಸ್. ಎಸ್. ಆರಕೇರಿ.—ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಯವರು ೧೯೭೯ ರಲ್ಲಿ ನಮ್ಮ ಬಿಜಾಪುರಕ್ಕೆ ಪ್ರವಾಸ ಬಂದಿದ್ದಾಗ್ಗೆ ನಮ್ಮ ಭಾಗದಲ್ಲಿ ಸದಾಕಾಲವೂ ಬರಗಾಲ ಬರುತ್ತಲೇ ಇರುತ್ತದೆ, ಆದ್ದರಿಂದ ಈ ಕೆರೆಗಳನ್ನು ತೆಗೆದು ಕೊಳ್ಳಬೇಕೆಂದು ನಾವು ಮನವಿಯನ್ನು ಮಾಡಿಕೊಂಡಿದ್ದೆವು. ಅವರೂ ಕೂಡ ಇದನ್ನು ತೆಗೆದುಕೊಳ್ಳುವುದಾಗಿ ನಮಗೆ ಆಶ್ವಾಸನೆಯನ್ನು ನೀಡಿದ್ದರು. ಆದರೆ ಇದುವರೆಗೂ ತಾವು ಏತಕ್ಕೆ ಈ ಕೆರೆಗಳ ಕೆಲಸವನ್ನು ತೆಗೆದುಕೊಳ್ಳಲಿಲ್ಲ ?

ಶ್ರೀ ಎಂ. ಎಂ. ಖಾರ್ಗೆ.—(ಸಿ) ಲಿಸ್ಟ್‌ನಲ್ಲಿರತಕ್ಕ ಕೆರೆಗಳ ನಿರ್ಮಾಣ ಕಾರ್ಯವನ್ನು ತೆಗೆದು ಕೊಳ್ಳಬೇಕೆಂದು ಸರ್ಕಾರದಿಂದ ಸ್ಪಷ್ಟವಾದ ನಿರ್ದೇಶನವನ್ನು ಕೊಟ್ಟಿಲ್ಲ.

ಶ್ರೀ ಎಸ್. ಎಸ್. ಆರಕೇರಿ.—ಸ್ವಾಮಿ, ನಮ್ಮ ಕಡೆ ಪ್ರತಿವರ್ಷವೂ ಬರಗಾಲ ಇದ್ದೇ ಇರುತ್ತದೆ.

ಅಧ್ಯಕ್ಷರು.—ಪ್ರತಿವರ್ಷವೂ ಬರಗಾಲ ಇದೆ. ಬರಗಾಲ ಇದೆ ಎಂದು ಹೇಳುವುದಕ್ಕೆ ಹೋಗಬೇಡಿ. ಹಾಗೆ ಹೇಳಿದರೆ ಆ ಬರಗಾಲ ಖಾಯಂ ಆಗಿಯೇ ಬರಬಹುದು.

ಶ್ರೀ ಎಂ. ಎಂ. ಖಾರ್ಗೆ —ಸ್ವಾಮಿ, ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಈ ಕೆಲಸಕ್ಕೋಸ್ಕರ ಸುಮಾರು ೧ ಕೋಟಿ ೧೨ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ.

ಶ್ರೀ ಎಸ್. ಎಸ್. ಆರಕೇರಿ.—ಸ್ವಾಮಿ, ಆರ್ಜನಾಳ್ ಕೆರೆ ಹೆಸರು (ಸಿ) ಲಿಸ್ಟ್‌ನಲ್ಲಿ ಇದೆ ಎಂದು ಹೇಳಿದಿರಿ. ತಾವು ಮನಸ್ಸುಮಾಡಿ ಈ ಕೆಲಸವನ್ನು ಕೂಡಲೇ ತೆಗೆದುಕೊಳ್ಳುವುದಕ್ಕೆ (ಸಿ) ಲಿಸ್ಟ್‌ನಿಂದ ಮೇಲಕ್ಕೆ ಏರಿಸುತ್ತೀರಾ ?

ಶ್ರೀ ಎಂ. ಎಂ. ಖಾರ್ಗೆ.—ಪ್ರಯಾರಿಟಿ ಬೇಸಿಸ್ ಮೇಲೆ ಇವುಗಳನ್ನು ತೆಗೆದುಕೊಳ್ಳುತ್ತೇವೆಂದು ಈಗಾಗಲೇ ಹೇಳಿದ್ದೇವೆ. ಮುಂದಿನ ಲಿಸ್ಟ್‌ನಲ್ಲಿ ಇದನ್ನು ಪರಿಶೀಲಿಸುತ್ತೇವೆ.

Re-routing of KSRTC Buses via Chord Road

149. SRI T. B. JAYACHANDRA (Kallambela).—Will the Minister for Transport and Minor Irrigation be pleased to state:—

(a) whether it has come to the notice of Government that there is heavy traffic from Bangalore Central Bus Station to Malleswaram 18th Cross as all State Transport Mofussil buses routes through this area ;

(b) whether the Government would take steps to avoid the rush by shifting the route via Chord Road ?

SRI M. M. J. SADYOJATHA (Minister for Transport and Minor Irrigation).—

(a) No.

(b) Sampige Road and Margosa Road have been converted into one way traffic, removing the congestion. Hence there is no need to reroute the buses via Chord Road.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ಮಲ್ಲೇಶ್ವರಂ ಸರ್ಕಲ್‌ನಿಂದ ೧೮ನೇ ಕ್ರಾಸ್‌ವರೆಗೆ ತಾವು ಒನ್ ವೇ ಮಾಡಿದ್ದೀರಿ. ಇದರಿಂದಾಗಿ ಅಲ್ಲಿ ವಾಹನಗಳ ಸಂಚಾರ ಅಧಿಕವಾಗಿದ್ದು ಗದ್ದಲವಿರುವುದರಿಂದ ಸದರೀ ವಾಹನ ಸಂಚಾರವನ್ನು ಓಕಳೀಪುರ, ಕಾರ್ಡ್‌ರೋಡ್ ಮಾರ್ಗವಾಗಿ ತಿರುಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೆ ? ಹೀಗೆ ಮಾಡುವುದರಿಂದ ಸಂಚಾರ ಗದ್ದಲ ಕಡಿಮೆಯಾಗುತ್ತದೆಂದು ನನ್ನ ಸಲಹೆ.

ಶ್ರೀ ಎಂ. ಎಂ. ಖಾರ್ಗೆ (ಕಂದಾಯ ಸಚಿವರು) (ಮಾನ್ಯ ಸಾರಿಗೆ ಸಚಿವರ ಪರವಾಗಿ).—ಸಾರಿಗೆ ಪೋಲೀಸ್ ಕಮಿಷನರ್‌ರವರೂ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರೂ ಒಟ್ಟಿಗೆ ಸೇರಿ ಯಾವ ರೂಟ್‌ನಲ್ಲಿ ಬಸ್‌ಗಳನ್ನು ಓಡಿಸಬೇಕು, ಯಾವ ರೂಟ್‌ನಲ್ಲಿ ಬಸ್‌ಗಳನ್ನು ಓಡಿಸಬಾರದೆಂದು ಆಲೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅದೇ ಪ್ರಕಾರ ಈ ಒಂದು ಮಾರ್ಗವನ್ನು ಆಯ್ಕೆ ಮಾಡಿದ್ದಾರೆ.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ಈ ಮಾರ್ಗದಲ್ಲಿ ಸಂಚಾರ ಗದ್ದಲ ಜಾಸ್ತಿಯಾಗಿದೆ ಎಂದು ತಮಗೆ ಯಾವುದಾದರೂ ದೂರುಗಳು ಬಂದಿವೆಯೆ ? ಹಾಗೆ ದೂರುಗಳು ಬಂದಿದ್ದರೆ ಅದನ್ನು ಪರಿಶೀಲಿಸುತ್ತೀರಾ ?

ಶ್ರೀ ಎಂ. ಎಂ. ಖಾರ್ಗೆ.—ಸರ್ಕಾರಕ್ಕೆ ಅಂಥ ಯಾವ ದೂರು ಕೂಡ ಬಂದಿಲ್ಲ. ಈಗ ಜನರಿಗೆ ತೊಂದರೆಯಾಗಿದೆ ಎಂದು ತಾವು ಹೇಳಿದ್ದೀರಿ. ಇದನ್ನು ಪರಿಶೀಲಿಸುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ.—ಸರ್ಕಾರದ ಗಮನಕ್ಕೆ ಯಾವ ದೂರೂ ಕೂಡ ಬಂದಿಲ್ಲವೆಂದು ಹೇಳುತ್ತಿದ್ದೀರಿ ; ಬೆಂಗಳೂರು ನಗರದಿಂದ ಹೊರಗಡೆ ಬಸ್ಸುಗಳು ಹೋಗಬೇಕಾದರೆ ಈ ಮಾರ್ಗದಲ್ಲೇ ಹೋಗಬೇಕಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುವುದಾದರೆ ಅದರ ಅರ್ಥವಾದರೂ ಏನು ? ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇದರಿಂದ ಜನಸಾಮಾನ್ಯರಿಗೆ ತೊಂದರೆಯಾಗುತ್ತದೆಂದು ತಿಳಿದುಬಂದರೆ ಇದಕ್ಕೆ ಬೇರೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ಇದು ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಪ್ರಶ್ನೆಯಾದರೂ ಮಾನ್ಯ ಸದಸ್ಯರು ಇದನ್ನು ಕೇಳಿರುವುದು ಬಹಳ ಸಂತೋಷ. ಈ ಸಂಚಾರ ಮಾರ್ಗದಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತದೆಂದು ಅಲ್ಲಿನ ವರ್ತಕರು, ಡಾ. ಪಾರ್ಥಸಾರಥಿ ಎನ್ನುವವರು ಹಾಗೂ ಶಾಸನಸಭಾ ಸದಸ್ಯರು ಒಂದು ಮೆಮೋರಾಂಡಂನ್ನು ಕೊಟ್ಟಿದ್ದಾರೆ. ಅಲ್ಲಿ ರಸ್ತೆ ಅಪಘಾತಗಳು ಬಹಳವಾಗಿ ಸಂಭವಿಸಿ ಬಹಳ ಜನರು ಸಾಯುತ್ತಿದ್ದಾರೆ. ಇತ್ತೀಚೆಗೆ ಇಬ್ಬರು ಕಾಲೇಜು ಹುಡುಗಿಯರು ಬಸ್‌ಗೆ ಸಿಕ್ಕಿ ಸತ್ತುಹೋದರು. ಆ ಪ್ರದೇಶದಲ್ಲಿ ಹೆಚ್ಚಿನ ಜನಸಂಖ್ಯೆ ಇದ್ದು ಅಪಘಾತಗಳೂ ಕೂಡ ಹೆಚ್ಚುಹೆಚ್ಚಾಗಿ ಆಗಿರುತ್ತವೆ. ಆದ್ದರಿಂದ ಈ ಸಂಚಾರವನ್ನು ಬೇರೆ ಕಡೆಗೆ ಅಂದರೆ ಓಕಳೀಪುರ, ಕಾರ್ಡ್‌ರೋಡ್ ಮಾರ್ಗವಾಗಿ ಹೋಗುವಂತೆ ಮಾಡುವುದಕ್ಕಾಗುವುದಿಲ್ಲವೆ ?

ಶ್ರೀ ಎಂ. ಎಂ. ಖಾರ್ಗೆ.—ಹಿಂದೆ ೪ನೇ ಕ್ರಾಸ್, ೫ನೇ ಕ್ರಾಸ್, ೬ನೇ ಕ್ರಾಸ್, ೮ನೇ ಮುಖ್ಯ ರಸ್ತೆ ಈ ಮೂಲಕ ಹೋಗುತ್ತಿದ್ದವು. ಅಲ್ಲಿ ಜನಗಳಿಗೆ ತೊಂದರೆಯಾಗುತ್ತದೆಯೆಂದು ತಿಳಿದು ಬಂದ ಮೇಲೆ ಸಂಚಾರಿ ಪೋಲೀಸ್ ಕಮಿಷನರ್ ಮತ್ತು ರಸ್ತೆ ಸಾರಿಗೆ ಸಂಸ್ಥೆಯವರೂ ಒಟ್ಟಿಗೇ ಕೂತು ಚರ್ಚೆಮಾಡಿ ಬೆಂಗಳೂರಿನಿಂದ ಮಫ್ಫುಸಲ್ ಪ್ರದೇಶಗಳಿಗೆ ಹೋಗತಕ್ಕ ಬಸ್‌ಗಳನ್ನು ಈ ಮಾರ್ಗದಲ್ಲಿ ಹೋಗುವಂತೆ ತೀರ್ಮಾನ ತೆಗೆದುಕೊಂಡರು. ಇದು ಬೇಡವೆಂದು ಹೇಳುವುದಾದರೆ ಇದಕ್ಕೆ ತಾವು ಬೇರೆ ಸೂಚನೆಯನ್ನು ಕೊಡಬಹುದು.

ಶ್ರೀ ಪಿ. ರಾಮದೇವ್.—ತಾವು ಹೇಳುವುದು ಸರಿ. ಹಿಂದೆ ಈ ಬಸ್‌ಗಳು ೨, ೩, ೪ ಹಾಗೂ ೮ನೇ ಮೈನ್ ರೋಡ್‌ನಲ್ಲಿ ಹೋಗುತ್ತಿದ್ದಾಗ ಅಲ್ಲಿ ಒನ್ ವೇ ಇರಲಿಲ್ಲ. ಈಗ ಇಲ್ಲಿ ಒನ್ ವೇ ಮಾಡಿದಮೇಲೆ ವಾಹನಸಂಚಾರ ಜಾಸ್ತಿಯಾಗಿದೆ. ಒಂದು ರಸ್ತೆಯಲ್ಲಿ ಹೋಗಬೇಕು, ಇನ್ನೊಂದು ರಸ್ತೆಯಲ್ಲಿ ಬರಬೇಕಾಗಿದೆ. ಇವಾದಮೇಲೆ ಅಲ್ಲಿನ ಜನರು ಮೆಮೋರ್ಯಾಂಡಂನ್ನು ಕೊಟ್ಟಿದ್ದಾರೆ.

ನಾನೂ ಕೂಡ ಪತ್ರವನ್ನು ಬರೆದಿದ್ದೇನೆ. ಮಫ್ಫೂಸಲ್ ಪ್ಲೇಸ್‌ಗಳಿಗೆ ಹೋಗತಕ್ಕ ಬಸ್‌ಗಳನ್ನು ಬೇರೆ ಮಾರ್ಗದಲ್ಲಿ ಹೋಗುವಂತೆ ಮಾಡಿದರೆ ಬಹಳ ಒಳ್ಳೆಯದು.

ಸ್ವಾಮಿ ಇನ್ನೊಂದು ವಿಚಾರ ಹೇಳುವುದಾದರೆ, ಒನೇ ಕ್ರಾಸ್‌ನಲ್ಲಿ ಬಸ್‌ಗಳು ಬಂದು ನಿಂತು ಕೊಳ್ಳುತ್ತವೆ. ಅಲ್ಲಿ ಪ್ರಯಾಣಿಕರು ಬಹಳವಾಗಿರುತ್ತಾರೆ. ಅಲ್ಲಿ ಮಲಮೂತ್ರ ವಿಸರ್ಜನೆ ಮಾಡುವು ದಕ್ಕೆ ಹೆಣ್ಣು ಮಕ್ಕಳಿಗೆ ಜಾಗವಿಲ್ಲ. ಇದರಿಂದ ಬಹಳ ಕಷ್ಟವಾಗಿದೆ. ಆದ್ದರಿಂದ ಅಲ್ಲಿ ಲ್ಯಾಟ್ರಿಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ಎಂ. ಖಾರ್ಗೆ.—ಈ ಮಾರ್ಗವಾಗಿ ಹೋಗತಕ್ಕ ಬಸ್‌ಗಳಿಂದ ಜನಗಳಿಗೆ ತೊಂದರೆ ಯಾಗುತ್ತಿದೆಯೆಂದು ಹೇಳುತ್ತಿದ್ದೀರಿ. ಇದನ್ನು ಪರಿಶೀಲನೆ ಮಾಡೋಣ. ಇಲ್ಲಿ ಏನಾಗಿದೆ ಎಂದರೆ, ಆರ್.ಪಿ.ಸಿ. ಲೇಔಟ್ ಮಾರ್ಗವಾಗಿ ಬಸ್‌ಗಳನ್ನು ಓಡಿಸೋಣವೆಂದರೆ, ಆ ಮಾರ್ಗದಲ್ಲಿ ಅನೇಕ ಹಳ್ಳಿಗಳಿವೆ. ಆ ಹಳ್ಳಿಗಳ ಜನರು ಬಸ್‌ನಲ್ಲಿ ಬರುವಾಗ ತಮ್ಮ ಸಾಮಾನುಗಳನ್ನೆಲ್ಲಾ ಬಸ್‌ಮೇಲೆ ಹಾಕಿಕೊಂಡು ಬರುತ್ತಾರೆ, ಇದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತದೆಂದು ಕೆ.ಎಸ್.ಆರ್.ಟಿ.ಸಿ. ಯವರು ಹೇಳಿದ್ದರಿಂದ ಇದನ್ನೂ ನಾವು ಪರಿಶೀಲಿಸಬೇಕಾಗಿದೆ.

ಶ್ರೀ ದೇವರಾಜ ಆಳ್ವ.—ಸ್ವಾಮಿ, ರಸ್ತೆಯ ಎರಡೂ ಕಡೆ ಎರಡೆರಡು ಅಡಿ.....

ಅಧ್ಯಕ್ಷರು.—ಈ ವಿಚಾರವನ್ನು ಪರಿಶೀಲಿಸುವುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಪುನಃ ತಾವು ಏನು ಹೇಳುತ್ತಿದ್ದೀರಿ. ಅಷ್ಟೇ ಸಾಕು ಬಿಡಿ.

Percentage of Representation to Backward Classes at the time of Recruitment.

202. SRI M. GANGANNA (Kustagi).—Will the Minister for Social Welfare and Backward Classes be pleased to state :—

(a) the arrangement made to consider the percentage of representation to Backward classes while recruitment in the Department of Backward Classes and Minorities as existing in the Social Welfare Department ;

(b) the rules in force for such arrangements ;

(c) the action proposed to be taken by Government if the employers do not co-operate for the said arrangement while considering percentage of representation in recruitment ;

(d) the powers vested to the Director of Backward Classes and Minorities to take action on the said employers ?

SRI P. VENKATARAMANA (Minister for Social Welfare & Backward Classes).—

(a) There is an "Employment Guide and Course Cell" at the Directorate of Backward Classes and Minorities. On the similar lines of "Employment Cell" existing at the Directorate of Social Welfare to give suitable guidelines to the Employers for considering the required number of percentage of representation of Backward Classes at the time of recruitment.